# ನಮ್ಮೊಡನೆ

## ಮದುವೆಯ ಅಡಿಪಾಯ ಶಿಥಿಲ?

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮದುವೆ ಎಂಬುದು ಅತ್ಯಂತ ಮುಖ್ಯ ಹಾಗೂ ಅನಿವಾರ್ಯ ವ್ಯವಸ್ಥೆ. ಗಂಡು ಮತ್ತು ಹೆಣ್ಣು ನೆಮ್ಮದಿಯಾಗಿ ಬದುಕುತ್ತ ಆರೋಗ್ಯಕರ ಲೈಂಗಿಕ ಜೀವನ ನಡೆಸಲು ಮದುವೆಯ ಅಗತ್ಯವಿದೆ. ಮಹಿಳೆಗೆ ಸಾಮಾಜಿಕ ಭದ್ರತೆ ಸಿಗುವುದು ಮದುವೆಯಿಂದ. ಅನೇಕ ಮಹಿಳೆಯರಿಗೆ ಮದುವೆ ಆರ್ಥಿಕ ಭದ್ರತೆಯನ್ನೂ ನೀಡುತ್ತದೆ. ಆದರೆ ಇತ್ತೀಚಿನ ಕೆಲ ಬೆಳವಣಿಗೆಗಳನ್ನು ಗಮನಿಸಿದರೆ ಮದುವೆ ವ್ಯವಸ್ಥೆ ಅರ್ಥ ಕಳೆದುಕೊಳ್ಳುತ್ತಿದೆ ಅನ್ನಿಸುತ್ತದೆ. ಸಲಿಂಗ ಕಾಮ, ವಿವಾಹವಾಗದೆ ಗಂಡು, ಹೆಣ್ಣು ಒಂದಾಗಿ ಜೀವಿಸುವ ಅವಕಾಶ ಇತ್ಯಾದಿಗಳು ಈಗ ಕಾನೂನುಬಾಹಿರ ಅಲ್ಲ. ನಮ್ಮ ನ್ಯಾಯಾಂಗವೂ ಒಪ್ಪಿಕೊಂಡಿರುವ ಈ ಬೆಳವಣಿಗೆಗಳನ್ನು ನಮ್ಮ ಸಮಾಜವೂ ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದರೂ ದೇಶದ ಬಹುತೇಕ ಜನರು ಮದುವೆ ಮತ್ತು ಕುಟುಂಬ ವ್ಯವಸ್ಥೆಯನ್ನು ಇಷ್ಟಪಡುತ್ತಾರೆ ಮತ್ತು ಗೌರವಿಸುತ್ತಾರೆ. ದುರದೃಷ್ಟಕರ ಬೆಳವಣಿಗೆ ಎಂದರೆ ಕುಟುಂಬದ ಹಿರಿಯರು ಒಪ್ಪಿ ಮಾಡಿದ ಮದುವೆಗಳೂ ವಿಚ್ಛೇದನದಲ್ಲಿ ಪರ್ಯವಸಾನಗೊಳ್ಳುತ್ತಿವೆ. ಪ್ರೀತಿಸಿ ಮದುವೆಯಾದವರು, ಜಾತಿ, ಧರ್ಮಗಳನ್ನು ಪರಿಗಣಿಸದೆ ಮದುವೆಯಾದವರೂ 'ಬೇರೆ'ಯಾಗುತ್ತಿದ್ದಾರೆ. ಈ ಬೆಳವಣಿಗೆಗಳು ನಮ್ಮ ಮದುವೆ ಮತ್ತು ಕುಟುಂಬ ವ್ಯವಸ್ಥೆ ಬಗೆಗಿನ ನಂಬಿಕೆಗಳನ್ನು ಬುಡಮೇಲು ಮಾಡುವಂತಹವು.

ಇತ್ತೀಚೆಗೆ ನಡೆದ ಒಂದು ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ವಿವಾಹ ವಿಚ್ಛೇದನಗಳು ಹೆಚ್ಚುತ್ತಿವೆ. ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದವರಲ್ಲೇ ವಿಚ್ಛೇದನಗಳು ಹೆಚ್ಚು. ಸಮೀಕ್ಷೆಗಾಗಿ ದೇಶದ ಉದ್ದಗಲದಲ್ಲಿ ನಾನ್ನೂರಕ್ಕೂ ಹೆಚ್ಚು ಮಹಿಳೆಯರನ್ನು ಸಂಪರ್ಕಿಸಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಸಮೀಕ್ಷಾ ವರದಿಯ ಪ್ರಕಾರ ವಿಚ್ಛೇದಿತ ಮಹಿಳೆಯರಲ್ಲಿ ಶೇ. 80ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗಿನವರು. ಇಪ್ಪತ್ತಮೂರರಿಂದ ಮೂವತ್ತೆರಡು ವರ್ಷ ವಯಸ್ಸಿನವರು. ಅವರ ಮಾಸಿಕ ಆದಾಯ 4000 ರೂ. ವಿಚ್ಛೇದನ ಪಡೆಯುವ ಶೇ.80ರಷ್ಟು ಮಹಿಳೆಯರಿಗೆ ಆರ್ಥಿಕ ಭದ್ರತೆ ಇಲ್ಲ. ಜೀವನೋಪಾಯಕ್ಕೆ ಅವರು ತಮ್ಮ ಮಕ್ಕಳೊಂದಿಗೆ ತಂದೆ ತಾಯಿಯರನ್ನೇ ಆಶ್ರಯಿಸುತ್ತಾರೆ. ವಿಚ್ಛೇದಿತ ಮಹಿಳೆಯರಲ್ಲಿ ಶೇ.58.5ರಷ್ಟು ಮಂದಿ ಮನೆಯ ಹೊರಗೆ ದುಡಿಯುವ ಅನಿವಾರ್ಯತೆ ಇದೆ. ಶೇ.21.63ರಷ್ಟು ಮಂದಿ ಮನೆಕೆಲಸ ಮಾಡಿ ಹೊಟ್ಟೆ ಹೊರೆಯುತ್ತಾರೆ. ವಿಚ್ಛೇದಿತರಲ್ಲಿ ಶೇ.2.46ರಷ್ಟು ಮಂದಿಗೆ ಮಾತ್ರವೇ ಒಳ್ಳೆಯ ಉದ್ಯೋಗವಿದೆ. ಶೇ.1.7ರಷ್ಟು ಮಹಿಳೆಯರ ಮಾಸಿಕ ಆದಾಯ 35,000 ರೂ. ವಿಚ್ಛೇದನ ಪಡೆಯುವ ಮಹಿಳೆಯರಲ್ಲಿ ಅರ್ಧದಷ್ಟು ಮಂದಿಗೆ ಗಂಡನಿಂದ ಜೀವನಾಂಶ ಪಡೆಯಬೇಕು ಎಂಬ ಕಾನೂನಿನ ತಿಳುವಳಿಕೆಯೂ ಇಲ್ಲ! ಈ ಅಂಕಿ ಅಂಶಗಳು ವಿಚ್ಛೇದನ ಪಡೆಯುವ ಮಹಿಳೆಯರ ಅಸಹಾಯಕ ಪರಿಸ್ಥಿತಿಯನ್ನು ಅನಾವರಣಗೊಳಿಸುತ್ತವೆ.

ವಿಚ್ಛೇದನಕ್ಕೆ ಅನೇಕ ಕಾರಣಗಳಿರಬಹುದು. ಆದರೆ ಶೇ.83ರಷ್ಟು ಮಹಿಳೆಯರು ಕೌಟುಂಬಿಕ ಹಿಂಸೆ ಮತ್ತು ದೌರ್ಜನ್ಯಗಳನ್ನು ಸಹಿಸಲು ಆಗದೆ ವಿಚ್ಛೇದನ ಪಡೆಯುವ ನಿರ್ಧಾರಕ್ಕೆ ಬರಬೇಕಾಯಿತು ಎಂದು ಹೇಳಿದ್ದಾರೆ. ಭಾರತೀಯ ಮದುವೆ ವ್ಯವಸ್ಥೆಯ ಅಡಿಪಾಯ ಸಡಿಲವಾಗುತ್ತಿದೆ. ಭವಿಷ್ಯದಲ್ಲಿ ಮದುವೆ ಮತ್ತು ಕುಟುಂಬ ವ್ಯವಸ್ಥೆಯ ಸ್ವರೂಪ ಬದಲಾಗಬಹುದು ಎಂಬುದನ್ನು ಈ ಅಂಕಿಅಂಶಗಳು ಸೂಚಿಸುತ್ತವೆ ಎನ್ನಬಹುದೇ? 'ಸಮೀಕ್ಷೆಗೆ ಆಯ್ಕೆ ಮಾಡಿಕೊಂಡ ಸುಮಾರು ನಾನ್ನೂರು ಮಹಿಳೆಯರ ಅಭಿಪ್ರಾಯಗಳು ದೇಶದ ಒಟ್ಟಾರೆ ಮಹಿಳೆಯರ ಅಭಿಪ್ರಾಯಗಳನ್ನು ಸೂಚಿಸುವುದಿಲ್ಲ. ಕೆಲವರ ಅಭಿಪ್ರಾಯಗಳನ್ನು ಇಟ್ಟುಕೊಂಡು ಭಾರತೀಯ ವಿವಾಹ ವ್ಯವಸ್ಥೆಯ ಅಡಿಪಾಯವೇ ಕುಸಿಯುತ್ತಿದೆ ಎಂಬ ನಿರ್ಧಾರಕ್ಕೆ ಬರಲಾಗದು' ಎಂದು ವಾದಿಸಬಹುದು. ಆದರೆ ಈ ಸಮೀಕ್ಷಾ ವರದಿಗಳನ್ನು ಆಧಾರರಹಿತ ಎಂದು ತಳ್ಳಿಹಾಕಲು ಸಾಧ್ಯವಿಲ್ಲ. ಭಾರತ ಮಾತ್ರವಲ್ಲ ಯಾವುದೇ ದೇಶದ ಸಾಮಾಜಿಕ ನೆಮ್ಮದಿ ಮದುವೆ ಹಾಗೂ ಕೌಟುಂಬಿಕ ವ್ಯವಸ್ಥೆಯನ್ನು ಅವಲಂಬಿಸಿದೆ.

ದೇಶ ಎಷ್ಟೇ ಪ್ರಗತಿ ಸಾಧಿಸಿದ್ದರೂ ಜನರು ನೆಮ್ಮದಿಯಾಗಿ ಬದುಕುವಂತಹ ವ್ಯವಸ್ಥೆ ಅತ್ಯಂತ ಮುಖ್ಯ. ಶಿಕ್ಷಣದಿಂದ ಮಹಿಳೆಯರಿಗೆ ಆರ್ಥಿಕ ಭದ್ರತೆ ಮತ್ತು ಸ್ವಾವಲಂಬಿ ಬದುಕು ಸಿಕ್ಕಬಹುದು. ಆದರೆ ನೆಮ್ಮದಿಯ ಬದುಕು ಹಾಗೂ ಆರೋಗ್ಯಕರ ಲೈಂಗಿಕ ಜೀವನಕ್ಕೆ ಮದುವೆ ಅಗತ್ಯವಿದೆ. ಈ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು. ವಿಚ್ಛೇದನ ನೀಡುವ ಅಥವಾ ಪಡೆಯುವ ಭರದಲ್ಲಿ ಹೆಚ್ಚಿನ ಹಾನಿ ಆಗುವುದು ಮಹಿಳೆಯರಿಗೆ. ಗಂಡ ಮತ್ತು ಹೆಂಡತಿ ನಡುವೆ ಉದ್ಭವಿಸುವ ಸಮಸ್ಯೆಗಳಿಗೆ ವಿಚ್ಛೇದನವೊಂದೇ ಪರಿಹಾರ ಅಲ್ಲ ಎನ್ನುವುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು.

■ ಪ್ರೇಮಕುಮಾರ್ ಹರಿಯಬ್ಬೆ

ಭಾರತೀಯ ಮದುವೆ ವ್ಯವಸ್ಥೆಯ ಅಡಿಪಾಯ ಸಡಿಲವಾಗುತ್ತಿದೆ. ಭವಿಷ್ಯದಲ್ಲಿ ಮದುವೆ ಮತ್ತು ಕುಟುಂಬ ವ್ಯವಸ್ಥೆಯ ಸ್ವರೂಪ ಬದಲಾಗಬಹುದು ಎಂಬುದನ್ನು ಈ ಅಂಕಿಅಂಶಗಳು ಸೂಚಿಸುತ್ತವೆ ಎನ್ನಬಹುದೇ? 'ಸಮೀಕ್ಷೆಗೆ ಆಯ್ಕೆ ಮಾಡಿಕೊಂಡ ಸುಮಾರು ನಾನ್ನೂರು ಮಹಿಳೆಯರ ಅಭಿಪ್ರಾಯಗಳು ದೇಶದ ಒಟ್ಟಾರೆ ಮಹಿಳೆಯರ ಅಭಿಪ್ರಾಯಗಳನ್ನು ಸೂಚಿಸುವುದಿಲ್ಲ. ಕೆಲವರ ಅಭಿಪ್ರಾಯಗಳನ್ನು ಇಟ್ಟುಕೊಂಡು ಭಾರತೀಯ ವಿವಾಹ ವ್ಯವಸ್ಥೆಯ ಅಡಿಪಾಯವೇ ಕುಸಿಯುತ್ತಿದೆ ಎಂಬ ನಿರ್ಧಾರಕ್ಕೆ ಬರಲಾಗದು' ಎಂದು ವಾದಿಸಬಹುದು. ಆದರೆ ಈ ಸಮೀಕ್ಷಾ ವರದಿಗಳನ್ನು ಆಧಾರರಹಿತ ಎಂದು ತಳ್ಳಿಹಾಕಲು ಸಾಧ್ಯವಿಲ್ಲ. ಭಾರತ ಮಾತ್ರವಲ್ಲ ಯಾವುದೇ ದೇಶದ ಸಾಮಾಜಿಕ ನೆಮ್ಮದಿ ಮದುವೆ ಹಾಗೂ ಕೌಟುಂಬಿಕ ವ್ಯವಸ್ಥೆಯನ್ನು ಅವಲಂಬಿಸಿದೆ.

